# ಕಾಮನ ಬಿಲ್ಲು

## A ಯಾರು ಸರಿ?



ತರುಣ್ ಮತ್ತು ವರುಣ್ ಒಂದು ಸ್ಪರ್ಧೆ ಏರ್ಪಡಿಸಿದರು. ಎರಡು ಖಾಲಿ ಹಾಳೆಗಳನ್ನು ಮೇಲಿನಿಂದ ಕೆಳಕ್ಕೆ ಎಸೆದಾಗ ಯಾರ ಹಾಳೆ ಮೊದಲು ನೆಲ ಮುಟ್ಟುವುದೋ ಅವರು ಗೆದ್ದಂತೆ ಎಂದು ಒಪ್ಪಂದವಾಯಿತು. ತರುಣ್ ತನ್ನ ಕಡೆ ಇದ್ದ ಹಾಳೆಯನ್ನು ಚೆಂಡಿನ ಆಕಾರದಂತೆ ಮುದ್ದೆ ಮಾಡಿ, 'ಇದು ಬೇಗ ಕೆಳಗೆ ಬೀಳುತ್ತದೆ' ಎಂದ.


'ಇಲ್ಲ. ನನ್ನ ಹಾಳೆ ಮೊದಲು ನೆಲ ಮುಟ್ಟುತ್ತದೆ' ಎಂದ ವರುಣ್.

ಇಬ್ಬರೂ ಒಂದೇ ಸಮಯಕ್ಕೆ, ಒಂದೇ ಎತ್ತರಕ್ಕೆ ನಿಂತು ಹಾಳೆಯನ್ನು ಕೆಳಕ್ಕೆ ಎಸೆದರು.

ಹಾಗಾದರೆ ಈಗ ಹೇಳಿ. ಯಾರ ಹಾಳೆ ಮೊದಲು ಮುಟ್ಟುತ್ತದೆ? ಮತ್ತೆ ಯಾಕೆ?

## B ಆಟ–ಚಿತ್ರ

ಇಲ್ಲಿರುವ ಭಾರತದ ಜನಪ್ರಿಯ ಆಟ ಮತ್ತು ದೇಹದಾರ್ಢ್ಯ ವ್ಯಾಯಾಮಗಳನ್ನು ಹೆಸರಿಸಿ.




## C ಬುದ್ಧಿಗೆ ಗುದ್ದು




ಒಬ್ಬ ಮಾರಾಟಗಾರ ಪುರಾತನ ಕಾಲದ ಚಪ್ಪಲಿ ಸ್ಟ್ಯಾಂಡ್ ಅನ್ನು ತನ್ನ ಅಂಗಡಿಯಲ್ಲಿಟ್ಟ. ತಾನು ಖರೀದಿಸಿದ ಮೂಲ ಬೆಲೆಗೆ ಶೇ. 25ರಷ್ಟು ಹೆಚ್ಚಿಗೆ ಹಣ ಸೇರಿಸಿ, ಚೀಟಿ ಕಟ್ಟಿದ.

ಒಂಭತ್ತು ತಿಂಗಳು ಕಳೆದರೂ ಯಾವುದೇ ಗಿರಾಕಿ ಅದನ್ನು ಕೊಂಡುಕೊಳ್ಳಲಿಲ್ಲ. ಆದ್ದರಿಂದ ಶೇ. 25ರಷ್ಟು ಹಣವನ್ನು ಕಡಿತಗೊಳಿಸಿದ ಹೊಸ ಚೀಟಿಯನ್ನು ಕಟ್ಟಿದ. ಹಾಗೆ ಮಾಡಿದ್ದೇ ತಡ, ಇದ್ದಕ್ಕಿದ್ದಂತೆ ಒಬ್ಬ ಗಿರಾಕಿ ಖರೀದಿಸಿಯೇ ಬಿಟ್ಟ.

ಮಾರಾಟಗಾರ 2,000 ರೂಪಾಯಿಗೆ ಅದನ್ನು ಕೊಂಡುಕೊಂಡಿದ್ದ. ಹಾಗಾದರೆ ಅವನು ಮಾರಿದ್ದು ಯಾವ ಬೆಲೆಗೆ?

## D ತಪ್ಪು ಕಂಡುಹಿಡಿಯಿರಿ

ಕಲಾವಿದ, ಈ ಚಿತ್ರ ಬಿಡಿಸುವಾಗ ಏನೋ ತಪ್ಪು ಮಾಡಿದ್ದಾನೆ. ಅದನ್ನು ಕಂಡುಹಿಡಿಯಿರಿ.



### ಉತ್ತರಗಳು

A.ತರುಣನದೇ ಸರಿ. ದುಂಡಗೆ, ಚೆಂಡಿನಂತೆ ಮುದ್ದೆ ಮಾಡಿದ ಹಾಳೆ ಬೇಗನೆ ಕೆಳಕ್ಕೆ ಬೀಳುತ್ತದೆ.

B.1. ಗಿಲ್ಲಿ ದಾಂಡು, 2. ಲಗೋರಿ, 3. ಫುಗಡಿ, 4. ಖೋಖೋ. 5. ಪೋಲೋ, 6. ಮಲ್ಲಕಂಬ

C. ಮೂಲ ಬೆಲೆ 2,000ರೂಪಾಯಿಗೆ.

D. ಮಂಜುಗಡ್ಡೆ ದಿಬ್ಬವನ್ನು ನೀರಿನ ಮೇಲ್ಭಾಗದಲ್ಲಿ ಕಾಣುವಂತೆ ಚಿತ್ರಿಸಲಾಗಿದೆ. ಸೂರ್ಯನ ಶಾಖ ಮತ್ತು ಗಾಳಿಗೆ ಬೇಗನೆ ಕರಗುವ ಮಂಜುಗಡ್ಡೆ, ಬುಡದಲ್ಲಿ ನಿಧಾನ ಕರಗುತ್ತದೆ. ಹೀಗೆ ಬಂಡೆಯ ಹಾಗೆ ನಿಲ್ಲಿಸಿದ ಮಂಜುಗಡ್ಡೆ ದಿಬ್ಬ ಹಡಗಿಗೆ ಅಪಾಯವಿದೆ ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ ನೀರಿನ ಮೇಲೆ ಮಂಜುಗಡ್ಡೆ ದಿಬ್ಬದ ಸ್ವಲ್ಪವೇ ಭಾಗ ಕಾಣುವಂತೆ ಚಿತ್ರಿಸಬೇಕಿತ್ತು.

324 / © 2009 Amrita Bharati, Bharatiya Vidya Bhavan